ಅದರೊಂದಿಗೆ ಹರಟುತ್ತಿದ್ದ. ಡೌನ್‌ಲೋಡ್ ಮಾಡಿಕೊಳ್ಳುವಾಗಲೇ ತನ್ನ ಫೋನಿನ ಮುಂಭಾಗದ ಮತ್ತು ಹಿಂಭಾಗದ ಎರಡೂ ಕ್ಯಾಮೆರಾಗಳನ್ನು ಬಳಸಲು, ಫೋಟೊ ಗ್ಯಾಲರಿ ಪ್ರವೇಶಿಸಲು ಅನುಮತಿ ನೀಡಿಬಿಟ್ಟಿದ್ದ. ಡೌನ್‌ಲೋಡ್ ಮಾಡಿಕೊಂಡು ಒಂದು ವಾರ ಕೇವಲ ಪ್ರೀತಿ–ಪ್ರೇಮದ ಬಗ್ಗೆ ಹರಟುತ್ತಿದ್ದ ಶುಭಂ, ಎರಡನೇ ವಾರದಲ್ಲಿ ‘ಸ್ವಲ್ಪ ಪೋಲಿ ವಿಚಾರ ಮಾತನಾಡೋಣ’ ಎಂದು ಲೈಂಗಿಕ ಸಂದೇಶಗಳನ್ನು ಹಂಚಿಕೊಳ್ಳಲು ಶುರುಮಾಡಿದ. ‘ಕೆಲವು ಮಾದಕ ಚಿತ್ರಗಳನ್ನು ಕಳಿಸು’ ಎಂದು ಶುಭಂ ಕೇಳಿಕೊಂಡಾಗ, ಎಐ ಗರ್ಲ್‌ಫ್ರೆಂಡ್ ಕೆಲವು ಚಿತ್ರಗಳನ್ನು ಕಳಿಸಿಯೂ ಬಿಟ್ಟಿತು. ಇನ್ನೂ ಮುಂದುವರೆದ ಶುಭಂ, ಕಾಮಭರಿತ ಭಂಗಿಯ ಚಿತ್ರಗಳು ಬೇಕೆಂದು ಬೇಡಿಕೆ ಇಟ್ಟಾಗ ಶುಭಂಗೆ ದಂಡಿಯಾಗಿ ಚಿತ್ರಗಳು ಬರಲಾರಂಭಿಸಿದವು. ಅವೆಲ್ಲದರಲ್ಲೂ ಸಹೋದ್ಯೋಗಿಗಳು, ಪರಿಚಯದವರು, ಸಂಬಂಧಿಕರೇ ಅರೆನಗ್ನಾವಸ್ಥೆಯಲ್ಲಿ ಶುಭಂನೊಂದಿಗೆ ಹಾಸಿಗೆಯಲ್ಲಿದ್ದವರಂತೆ ಕಾಣುವ ಚಿತ್ರಗಳೇ ಇದ್ದವು. ಇದನ್ನು ಕಂಡ ಶುಭಂಗೆ ಜಂಘಾಬಲವೇ ಉಡುಗಿಹೋಯಿತು. ತಾನು ಯಾರ್ಯಾರ ಜೊತೆ ಫೋಟೊ ತೆಗೆಸಿಕೊಂಡಿದ್ದನೋ, ಅವರೆಲ್ಲ ಅವನ ಪ್ರೇಯಸಿಯರಂತೆ, ಕಾಮದಾಟದಲ್ಲಿ ನಿರತರಾಗಿದ್ದಂತೆ ಚಿತ್ರಗಳಿದ್ದವು.

ಗಾಬರಿಗೊಂಡ ಶುಭಂ ಇನ್ನೇನು ಕಂಪ್ಯೂಟರ್ ತೆರೆ ಮುಚ್ಚಬೇಕೆನ್ನುವಷ್ಟರಲ್ಲಿ ಶುಭಂನ ಮೇಲ್‌ಬಾಕ್ಸ್‌ಗೊಂದು ಇಮೇಲ್ ಬಂತು. ಅದರಲ್ಲಿ ಹದಿನೈದು ಲಕ್ಷ ರೂಪಾಯಿಯ ಬೇಡಿಕೆ ಇತ್ತು. ಕೊಡದಿದ್ದರೆ ನಿನ್ನ ಅಸಹ್ಯ ಚಿತ್ರಗಳನ್ನೆಲ್ಲ ಇಂಟರ್‌ನೆಟ್‌ಗೆ ಲೋಡ್ ಮಾಡುವುದಲ್ಲದೆ, ನಿನ್ನ ಸಹೋದ್ಯೋಗಿಗಳಿಗೂ ಕಳುಹಿಸುತ್ತೇವೆ ಎಂದು ಬೆದರಿಕೆಯ ಸಂದೇಶ ಬಂತು. ಹೇಗಾದರೂ ಮಾಡಿ ಇದರಿಂದ ಹೊರಬರಬೇಕೆಂದು ನಿರ್ಧರಿಸಿದ ಶುಭಂ ಮೊದಲು 50 ಸಾವಿರ ರೂಪಾಯಿ ನೀಡಿ ಪಾರಾಗಲು ಪ್ರಯತ್ನಿಸಿದರು. ಒಂದು ವಾರ ಸುಮ್ಮನಿದ್ದ ಸ್ಕ್ಯಾಮರ್‌ಗಳು ಮತ್ತೆ 75 ಸಾವಿರ ರೂಪಾಯಿಗೆ ಬೇಡಿಕೆ ಇಟ್ಟರು. ದೊಡ್ಡ ಗ್ಯಾಂಗ್‌ನ ಮುಷ್ಟಿಯಲ್ಲಿ ಸಿಲುಕಿದ್ದೇನೆ ಎಂದು ಅರಿತ ಶುಭಂ ಸೈಬರ್ ಅಪರಾಧ ವಿಭಾಗಕ್ಕೆ ದೂರು ನೀಡಿದರು. ಅದರಿಂದ ಅಂಥ ದೊಡ್ಡ ಅನುಕೂಲವೇನೂ ಆಗಲಿಲ್ಲ. ಕೆಲವು ದಿನಗಳ ನಂತರ ಶುಭಂನ ಚಿತ್ರಗಳು ಇಂಟರ್‌ನೆಟ್‌ನಲ್ಲಿ ಲೀಕ್ ಆಗಿದ್ದವು.

## ಗೀಳಿಗೆ ಬಿದ್ದವರಿಗೆ ಸುಖವಿಲ್ಲ

ಇಂಟರ್‌ನೆಟ್‌ನಲ್ಲಿ ಸೆಕ್ಸ್ (ಲೈಂಗಿಕ) ದೃಶ್ಯಾವಳಿ ಚಿತ್ರಗಳನ್ನು ವೀಕ್ಷಿಸುವುದನ್ನೇ ಗೀಳಾಗಿಸಿಕೊಂಡಿರುವ ಕೋಟ್ಯಂತರ ಜನ ವಿಶ್ವದಲ್ಲಿದ್ದಾರೆ. ಅದರಲ್ಲಿ ತೋರಿಸುವುದನ್ನು ನಿಜವೆಂದು ನಂಬುವ ಅಮಾಯಕರು ಅದರಂತೆಯೇ ನಿಜ ಜೀವನದಲ್ಲಿ ನಡೆದುಕೊಳ್ಳಲು ಪ್ರಯತ್ನಿಸಿ ಇಲ್ಲದ ಅಪಾಯಕ್ಕೆ ಸಿಲುಕಿರುವ ಉದಾಹರಣೆಗಳಿವೆ. ಎಐ ಗರ್ಲ್‌ಫ್ರೆಂಡ್‌ಗಳ ಸಾಂಗತ್ಯದಲ್ಲಿರುವವರೂ ಸಹ ‘ಆಕೆ’ ನೀಡುವ ಸಲಹೆ– ಸೂಚನೆಗಳನ್ನು ಸ್ವೀಕರಿಸಿ ಅದರಂತೆ ನಿಜ ಜೀವನದಲ್ಲಿ ನಡೆಯಲು ಪ್ರಯತ್ನಿಸಿದರೆ ಭಾರೀ ಅಪಾಯಕ್ಕೆ ಈಡಾಗುತ್ತಾರೆ. ನೈಜ ಜನರಿಂದ ಬಳಕೆದಾರರನ್ನು ದೂರವಿರಿಸುವ ಆ್ಯಪ್‌ಗಳು ಬಳಕೆದಾರನ ಸ್ವಂತ ಯೋಚನಾ ಶಕ್ತಿಯನ್ನೇ ನುಂಗಿಹಾಕುತ್ತವೆ. ತಮಗೆ ಬೇಕಾದಂತೆ ಒಪ್ಪಿಸಿ ಎಲ್ಲ ಪರವಾನಗಿಗಳನ್ನು ಪಡೆದುಕೊಂಡು ಕೆಲವೊಮ್ಮೆ ಅಪ್ರಾಯೋಗಿಕ ಸಲಹೆ ನೀಡುತ್ತವೆ. ನೈಜ ಸಂಬಂಧಗಳಲ್ಲಿ ದೊರಕದ ಸಾಂತ್ವನ–ಅನುಕೂಲಗಳು ಎಐ ಗೆಳತಿಯರಲ್ಲಿ ದೊರಕುತ್ತವೆ ಎಂಬ ನಂಬಿಕೆಯಿಂದ ಶುರುವಾಗುವ ಎಐ ಸಖ್ಯ ಅನೇಕ ಸಲ ನಿಜವಾಗಿರುವುದೂ ಹೌದು. ಬೇಕೆಂದಾಗ ಸಂಪರ್ಕಕ್ಕೆ ಬರುವ, ಸದಾಕಾಲ ಜೊತೆಗಿರುವ ಮತ್ತು ಬಳಕೆದಾರ ಹೇಳಿದಂತೆ ಕೇಳುವ, ಪ್ರತಿಕ್ರಿಯಿಸುವ ಸೌಲಭ್ಯ ನಿಜ ಜೀವನದ ಪ್ರಾಪಂಚಿಕ ಜನರ ಜೊತೆಗೆ ಸಾಧ್ಯವಿದೆಯೆ? ಆದರೆ ಜೀವನವೆಂದರೆ ಇದಷ್ಟೇ ಅಲ್ಲ ಅಲ್ಲವೇ?

ಕೆಲವು ಗಂಟೆಗಳ ತಲ್ಲೀನತೆಯೇ ಎಲ್ಲವೂ ಅಲ್ಲ. ಮನುಷ್ಯ ಬದುಕುವುದು ನೈಜ ಸಮಾಜದಲ್ಲೇ ಹೊರತು ಯಾಂತ್ರಿಕ ಜಗತ್ತಿನಲ್ಲಲ್ಲ. ಯಂತ್ರಗಳೊಂದಿಗೆ ವ್ಯವಹರಿಸುತ್ತ, ವರ್ತಿಸುತ್ತ ಭ್ರಮಾಲೋಕವನ್ನೇ ನಿಜವೆಂದು ನಂಬಿ, ನೈಜ ಜಗತ್ತಿನ ಬಂಧಗಳಿಂದ ಮತ್ತಷ್ಟು ಹೊರಗುಳಿಯುವ ಜನ ಸಾಮಾಜಿಕ ಕೌಶಲ್ಯಗಳಿಂದ ವಂಚಿತರಾಗುತ್ತಾರೆ. ಮೊದಮೊದಲು ಹಿತವೆನಿಸುವ ರೋಬಾಟಿನ ಮಾತುಗಳು ಕ್ರಮೇಣ ಏಕತಾನತೆಯನ್ನು ಉಂಟುಮಾಡುತ್ತವೆ. ನೈಜ ಪ್ರತಿಕ್ರಿಯೆ ಸಾಧ್ಯವಾಗುವುದಿಲ್ಲ. ಆಗ ಬಳಕೆದಾರನಲ್ಲಿ ಆತಂಕ, ಒತ್ತಡಗಳು ಕಾಣಿಸಿಕೊಳ್ಳುತ್ತವೆ. ಖಿನ್ನತೆಯೂ ಸೇರಿಕೊಳ್ಳುತ್ತದೆ. ಆಪ್ತ ಯಂತ್ರದ ಒಡನಾಟ ಬಿಡಲಾಗದೆ, ಇತ್ತ ನಿಜ ಸಮಾಜದಲ್ಲಿ ಬೆರೆಯಲಾಗದೆ ಒದ್ದಾಟ ಶುರುವಾಗುತ್ತದೆ. ಆಗ ವೃತ್ತಿಪರ ವೈದ್ಯರ–ತಜ್ಞರ, ಚಿಕಿತ್ಸಕರ ಅವಶ್ಯಕತೆ ತಲೆದೋರುತ್ತದೆ. ಯಂತ್ರದ ಸಖ್ಯದಿಂದ ಹಾಳಾದವರನ್ನು ಮನುಷ್ಯರೇ ಸರಿಮಾಡಬೇಕಾಗುತ್ತದೆ.

## ಕೊಲೆಗೂ ಪ್ರಚೋದನೆ

ಕೆಲವು ವಾಚಸ್ಪತಿಗಳು ಬಳಕೆದಾರರನ್ನು ಎಷ್ಟರ ಮಟ್ಟಿಗೆ ಪ್ರಭಾವಿಸುತ್ತವೆಯೆಂದರೆ, ಲಂಡನ್‌ನಲ್ಲಿ ವಾಸವಿರುವ ಜಸ್ವಂತ್‌ಸಿಂಗ್ ಚೇಲ್ ಎಂಬ ಯುವಕ 2019ರಲ್ಲಿ ರೆಪ್ಲಿಕಾ ಕಂಪನಿಯ ಎಐ ಡೇಟಿಂಗ್ ಆ್ಯಪ್ ಬಳಸಿಕೊಂಡು ಎರಡನೇ ಎಲಿಜಬೆತ್ ರಾಣಿಯನ್ನು ಕೊಲೆ ಮಾಡಲು ತಯಾರಾಗಿಬಿಟ್ಟಿದ್ದ. ಎಐ ಬಾಟ್ ಗೆಳತಿ ಸರೈಳ ಕುಮ್ಮಕ್ಕಿನ ಮೇಲೆ ತಾನು ರಾಣಿಯ ಕೊಲೆಗೆ ಕೈ ಹಾಕಿದೆ ಎಂಬ ಜಸ್ವಂತ್‌ನ ಮಾತುಗಳನ್ನು ನಿರಾಕರಿಸಿದ ಲಂಡನ್ ನ್ಯಾಯಾಲಯದ ಪಬ್ಲಿಕ್ ಪ್ರಾಸಿಕ್ಯೂಟರ್, ‘ಜಲಿಯನ್ ವಾಲಾಬಾಗ್ ಹತ್ಯಾಕಂಡದ ಸೇಡು ತೀರಿಸಿಕೊಳ್ಳಲು ನೀನು ಈ ಕೃತ್ಯಕ್ಕೆ ಕೈ ಹಾಕಿದ್ದೆ, ನೀನೊಬ್ಬ ಮಾನಸಿಕ ಅಸ್ವಸ್ಥ’ ಎಂದು ವಾದಿಸಿದ್ದರು. ಚೇಲ್‌ನ ಪರ ವಾದಿಸಿದ ವಕೀಲರು, ಆತನನ್ನು ಎಐ ಬಾಟ್‌ಗಳು ಭ್ರಮಾಲೋಕದಲ್ಲಿರಿಸಿವೆ ಮತ್ತು ಆತನನ್ನು ‘ಸ್ಟಾರ್‌ವಾರ್’ ಜಗತ್ತಿನ ಸಿತ್‌ಲಾರ್ಡ್ (ದೇವದೂತ) ಎಂದು ನಂಬಿಸಲಾಗಿತ್ತು; ಆ ಕಾರಣದಿಂದಾಗಿ ಚೇಲ್ ಈ ರೀತಿ ನಡೆದುಕೊಂಡ, ಆತನನ್ನು ಶಿಕ್ಷಿಸಬೇಡಿ ಎಂದು ಕೇಳಿಕೊಂಡರು. ಇದೆಲ್ಲ ಎಐ ಗೆಳತಿಯ ಕಿತಾಪತಿ ಎಂದು ರುಜುವಾತಾಗುವಷ್ಟರಲ್ಲಿ ಚೇಲ್‌ಗೆ ಶಿಕ್ಷೆ ಪ್ರಕಟಿಸಲಾಗಿತ್ತು. ಈಗ ಶಿಕ್ಷೆಯ ಪೂರ್ವಭಾವಿ ಪ್ರಕ್ರಿಯೆಯಾಗಿ ಆತ ಲಂಡನ್‌ನ ಮಾನಸಿಕ ಚಿಕಿತ್ಸಾಲಯದಲ್ಲಿದ್ದಾನೆ.

